**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಜಮಖಂಡಿ**

ಸಿಸಿ.ನಂ.323/2025

ಡಿ.ಡಬ್ಲೂಃ 1

ಹೆಸರು ಃ ಸದಾಶಿವ ಬೋವಿ

ತಂದೆ ಹೆಸರು ಃ ಹಣಮಂತ

ವಯಸ್ಸು ಃ 42 ವರ್ಷ

ಉದ್ಯೋಗ ಃ Electrical contractor

ವಾಸ ಸ್ಥಳ ಃ ತಾಃ ಜಮಖಂಡಿ.

**ದಿನಾಂಕಃ 06-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಆರೋಪಿ ಪರ ಶ್ರೀ.ವಿ .ಬಿ.ಟಿ ವಕೀಲರಿಂದ**

1. ನಾನು ಪಿರ್ಯಾದಿ ಪರಿಚಯಸ್ಥರು. ನಾನು ಫಿರ್ಯಾದಿ ಕಡೆಯಿಂದ ದಿಃ 12-07-2016 ರಂದು 6,50,000/- ಗಳನ್ನು ಪಡೆದುಕೊಂಡಿದ್ದೇನು. ಸದರಿ ಹಣವನ್ನು ಫಿರ್ಯಾದಿಕಡೆಯಿಂದ ನನ್ನ ಮುಧೋಳದಲ್ಲಿಯ ಪ್ಲಾಟ ಒತ್ತಿ ಇಟ್ಟು ನೋಂದಣಿ ಕರಾರು ಪತ್ರ ಮಾಡಿಕೊಟ್ಟು ಹಣ ಪಡೆದುಕೊಂಡಿದ್ದೇನು. ಆ ವೇಳೆಯಲ್ಲಿ ನೋಂದಣಿ ಕರಾರು ಪತ್ರದ ಜೊತೆಗೆ ಫಿರ್ಯಾದಿ ನನ್ನ ಕಡೆಯಿಂದ ವಿಜಯಾ ಬ್ಯಾಂಕಿನ ಚೆಕ್ಕ ನಂ.95405 ಮತ್ತು 95406 ಎರಡು ಚೆಕ್ಕಗಳನ್ನು ಪಡೆದುಕೊಂಡಿದ್ದರು. ಸದರಿ ಪ್ಲಾಟ ಸರ್ವೆ ನಂ.499 ಮತ್ತು ಪ್ಲಾಟ ನಂ.35 ಇತ್ತು.

2. ಸದರಿ ವ್ಯವಹಾರ ನನ್ನ ಮತ್ತು ಫಿರ್ಯಾದಿ ಮಧ್ಯೆಯೆ ಮುಗಿದಿದ್ದು ದಿಃ 06-02-2018 ರಂದು ನಾನು ಫಿರ್ಯಾದಿಗೆ ಹಣವನ್ನು ಬಡ್ಡಿ ಜೊತೆಗೆ ತಿಂಗಳಿಗೆ ಬಡ್ಡಿ ರೂ.19500/- ನ್ನು 2018 ರ ವರೆಗೆ ಮರುಪಾವತಿ ಮಾಡಿದ್ದು, ಸದರಿ 3 ಪ್ರತಿಶತದಂತೆ ಬಡ್ಡಿ ಪಾವತಿಸಿರುತ್ತೇನೆ. ಅದೇ ದಿನ ಫಿರ್ಯಾದಿ ಸದರಿ ನೋಂದಾಯಿತ ಕರಾರುಪತ್ರ ರದ್ದತಿ ಮಾಡಿಕೊಟ್ಟಿದ್ದು, ಅದರ ಜೊತೆ ನೀಡಿರುವ ಎರಡು ಚೆಕ್ಕಗಳನ್ನು ನಾನು ಮರಳಿ ಕೇಳಿದರೂ ಸಹ ಫಿರ್ಯಾದಿ ನನಗೆ ಕೊಡಲಿಲ್ಲ. ಅಲ್ಲದೇ ನಾನು, ನನ್ನ ಸಹೋದರ ಹಾಗೂ ಹಿರಿಯರು ಫಿರ್ಯಾದಿ ಮನೆಗೆ ಹೋಗಿ ಸಾಕಷ್ಟು ಸಲ ಸದರಿ ಚೆಕ್ಕಗಳನ್ನು ವಾಪಸ್ಸ ನೀಡುವಂತೆ ಕೇಳಿದರೂ ಸಹ ಕೊಟ್ಟಿರುವುದಿಲ್ಲ. ನಂತರ ಜಮಖಂಡಿಯ ಅಬುಬಕರ ದರ್ಗಾದ ಹತ್ತಿರ ನನಗೆ ಮತ್ತು ಫಿರ್ಯಾದಿಗೆ ಬಾಯಿ ಮಾತು ಆಗಿ ನವೆಂಬರ 2020 ರಲ್ಲಿ ಕೊನೆಯಬಾರಿ ಚೆಕ್ಕ ವಾಪಸ್ಸ

ಕೇಳಿದರೂ ಮನೆಯಲ್ಲಿ ಚೆಕ್ಕ ಸಿಗುತ್ತಿಲ್ಲ ಎಂದು ಹೇಳಿದರು. ನಂತರ ಫಿರ್ಯಾದಿ ಚೆಕ್ಕ ಸಂಬಂಧ ನನಗೆ ವಕೀಲರ ಮೂಲಕ ನನಗೆ ನೋಟಿಸ ಕಳುಹಿಸಿದ್ದು ನಾನು ಅದಕ್ಕೆ ಪ್ರತ್ಯುತ್ತರ ಕೊಟ್ಟಿರುತ್ತೇನೆ. ಸದರಿ ನೋಂದಾಯಿತ ಕರಾರು ಪತ್ರ ಮತ್ತು ರದ್ದತಿ ಪತ್ರ ಮಾಡುವ ವೇಳೆಯಲ್ಲಿ ನನ್ನ ಸಹೋದರ ಚಂದ್ರಶೇಖರ ಭೋವಿ ಹಾಜರ ಇದ್ದರು. ಸದರಿ ಚೆಕ್ಕ ಕಳೆದಿರುವ ಬಗ್ಗೆ ನನಗೆ ಒಂದು ಪತ್ರ ಬರೆದುಕೊಡುವಂತೆ ಫಿರ್ಯಾದಿಗೆ ಕೇಳಿಕೊಂಡರು ಸಹ ಫಿರ್ಯಾದಿ ನನಗೆ ಯಾವದೇ ಪತ್ರ ಕೊಡಲಿಲ್ಲ.

3. ನಾನು ಫಿರ್ಯಾದಿ ಬಳಿ ಯಾವದೇ ಹಣ ಪಡೆದಿಲ್ಲ. ಆಗ ವಿಜಯ ಬ್ಯಾಂಕ ಅಸ್ತಿವ್ವದಲ್ಲಿ ಇರಲಿಲ್ಲ. ಬದಲಾಗಿ ಸದರಿ ಬ್ಯಾಂಕು ಬ್ಯಾಂಕ ಆಫ್ ಬರೋಡಾದಲ್ಲಿ ವಿಲೀನವಾಗಿತ್ತು. ಸದರಿ ವಿಜಯಾ ಬ್ಯಾಂಕ ಚೆಕ್ಕಗಳು ಆಗ ಮಾನ್ಯವಿರಲಿಲ್ಲ. ಫಿರ್ಯಾದಿ ಯಾವುದೇ ಉದ್ಯೋಗ ಮಾಡುವುದಿಲ್ಲ ಮತ್ತು ಅವರಿಗೆ 11 ಲಕ್ಷ ರೂಪಾಯಿ ಕೊಡುವ ಹಣಕಾಸಿನ ಸಾಮರ್ಥ್ಯ ಇಲ್ಲಾ. ನಾನು ಯಾವುದೇ ತಪ್ಪು ಮಾಡಿಲ್ಲಾ ಆದ್ದರಿಂದ ನನಗೆ ಬಿಡುಗಡೆ ಮಾಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

<u>ಪಾಟೀ ಸವಾಲು ಫಿರ್ಯಾದಿ ಪರ ವಕೀಲರಿಂದಃ</u>

(ಫಿರ್ಯಾದಿದಾರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗಾಗಿ ಕಾಲವಕಾಶ ಕೋರುತ್ತಾರೆ, ಕಾಲವಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಸಾಕ್ಷಿಯ ಸಹಿ

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರ
ಸಹಿ/-
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ